# ಪರಿಸರಕ್ಕೆ ಮಾರಕ ಇ- ಕಸ

ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಈಗ ದೈನಂದಿನ ಬದುಕಿಗೆ ಅನಿವಾರ್ಯ. ಕಂಪ್ಯೂಟರ್, ಟೀವಿ, ಸೆಲ್ ಫೋನ್, ಫ್ಯಾನ್ ಇತ್ಯಾದಿಗಳಲ್ಲದೆ ಹತ್ತಾರು ಬಗೆಯ ಗೃಹೋಪಯೋಗಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಜನರು ಬಳಸುತ್ತಿದ್ದಾರೆ. ಎಲೆಕ್ಟ್ರಾನಿಕ್ ವಸ್ತುಗಳಿಲ್ಲದ ಮನೆ, ಅಂಗಡಿ, ಕಚೇರಿಗಳನ್ನು ಊಹಿಸಿಕೊಳ್ಳಲೂ ಆಗದು. ಇದು ಮಾಹಿತಿ ತಂತ್ರಜ್ಞಾನದ ಕಾಲಘಟ್ಟ. ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದೆ. ಹೊಸ, ಹೊಸ ಎಲೆಕ್ಟ್ರಾನಿಕ್ ಉಪಕರಣಗಳು ಮಾರುಕಟ್ಟೆಗೆ ಬರುತ್ತಿವೆ. ಹಳೆಯವು ಮೂಲೆಗುಂಪಾಗುತ್ತಿವೆ. ಹಳೆಯ, ಕೆಟ್ಟು ಹೋದ ಉಪಕರಣಗಳನ್ನು ಬಳಕೆದಾರರು ರದ್ದಿ ಎಂದು ಭಾವಿಸಿ ಸಿಕ್ಕ ಬೆಲೆಗೆ ಮಾರಾಟ ಮಾಡುತ್ತಾರೆ. ಕೊಳ್ಳುವವರು ಸಿಕ್ಕದಿದ್ದರೆ ಕಸದ ತೊಟ್ಟಿಗೆ ಎಸೆದು ಕೈ ತೊಳೆದುಕೊಳ್ಳುತ್ತಾರೆ. ಈ ನಿರುಪಯುಕ್ತ ಎಲೆಕ್ಟ್ರಾನಿಕ್ ವಸ್ತುಗಳನ್ನು ಇ-ಕಸ ಎನ್ನುತ್ತೇವೆ. ತೊಟ್ಟಿಗೆ ಎಸೆದ, ರದ್ದಿಯವನಿಗೆ ಮಾರಿದ ಇ-ಕಸ ಏನಾಯಿತು ಎಂದು ಬಳಕೆದಾರರು ಯೋಚಿಸುವುದಿಲ್ಲ.

ಇ-ಕಸ ಸಂಗ್ರಹಿಸುವ, ಮಾರಾಟ ಮಾಡುವ ಮತ್ತು ಅವುಗಳಲ್ಲಿರುವ ಲೋಹಗಳು, ಫೈಬರ್, ಪ್ಲಾಸ್ಟಿಕ್ ಇತ್ಯಾದಿಗಳನ್ನು ಬೇರ್ಪಡಿಸಿ ಮರುಬಳಕೆಗಾಗಿ ಸಂಸ್ಕರಿಸುವ ಪ್ರಕ್ರಿಯೆ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದೆ. ಇ-ಕಸದ ವಿಲೇವಾರಿ ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಹೋದರೆ ಬೆಚ್ಚಿಬೀಳಿಸುವಂತಹ ಸಂಗತಿಗಳು ಗೊತ್ತಾಗುತ್ತವೆ. ಎಲೆಕ್ಟ್ರಾನಿಕ್ ಕಸದ ನಿರ್ವಹಣೆ ಹಾಗೂ ಸಂಸ್ಕರಣೆ ಕುರಿತು ಇತ್ತೀಚೆಗೆ ನಡೆದ ಸಮೀಕ್ಷೆಯೊಂದು ತನ್ನ ವರದಿಯನ್ನು ಬಹಿರಂಗಪಡಿಸಿದೆ. ವರದಿಯ ಪ್ರಕಾರ ಬೆಂಗಳೂರೊಂದರಲ್ಲೇ ಇ- ಕಸವನ್ನು ಗುಡ್ಡೆ ಹಾಕುವ ನಾಲ್ಕು ಸಾವಿರಕ್ಕೂ ಹೆಚ್ಚು ತಿಪ್ಪೆಗಳಿವೆ. ಕಸದ ಸಂಸ್ಕರಣೆ ವೈಜ್ಞಾನಿಕವಾಗಿ ನಡೆಯುತ್ತಿಲ್ಲ. ಇಡೀ ರಾಜ್ಯಕ್ಕೆ ಮೂರು ಅಧಿಕೃತ ಸಂಸ್ಕರಣಾ ಘಟಕಗಳಿವೆ. ಈ ಮೂರೂ ಬೆಂಗಳೂರಿನಲ್ಲಿವೆ. ದುರದೃಷ್ಟದ ಸಂಗತಿ ಎಂದರೆ ರಾಜ್ಯ ಸರ್ಕಾರದ ಕಚೇರಿಗಳ ಇ- ಕಸ ಅಧಿಕೃತ ಸಂಸ್ಕರಣಾ ಘಟಕಕ್ಕೆ ಬರುತ್ತಿಲ್ಲ ಎನ್ನುವುದು! ಸರ್ಕಾರಕ್ಕೇ ಇ-ಕಸದ ಸಂಸ್ಕರಣೆಯ ಮಹತ್ವ ಅರ್ಥವಾಗಿಲ್ಲ. ಇಡೀ ದೇಶದಲ್ಲಿ ಪ್ರತಿ ವರ್ಷ ಸುಮಾರು ನಾಲ್ಕು ಲಕ್ಷ ಟನ್ ಇ- ಕಸ ಸಂಗ್ರಹವಾಗುತ್ತದೆ ಎಂಬ ಅಂದಾಜಿದೆ. ಕರ್ನಾಟಕದಲ್ಲಿ ಸಂಗ್ರಹವಾಗುವ ಇ-ಕಸದ ಪ್ರಮಾಣ ಸುಮಾರು 60,000 ಟನ್ ಎನ್ನಲಾಗಿದೆ.

ಬೆಂಗಳೂರಿನಲ್ಲಿ ಈಗ ಹಲವಾರು ಇ-ಕಸ-ಸಂಸ್ಕರಿಸುವ ಅನಧಿಕೃತ ಘಟಕಗಳು ತಲೆ ಎತ್ತಿವೆ. ಅತ್ಯಂತ ಜನ ನಿಬಿಡ ಹಾಗೂ ಬಡವರು, ಕೆಳ ಮಧ್ಯಮ ವರ್ಗದವರೇ ಹೆಚ್ಚಾಗಿರುವ ವಸತಿ ಪ್ರದೇಶದಲ್ಲಿ ಈ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಗಾಳಿ, ಬೆಳಕು ಸರಿಯಾಗಿಲ್ಲದ ಸಣ್ಣ ಕೊಠಡಿಗಳಲ್ಲಿ ಅತ್ಯಂತ ಅವೈಜ್ಞಾನಿಕವಾಗಿ ಇ-ಕಸವನ್ನು ಸಂಸ್ಕರಿಸಲಾಗುತ್ತಿದೆ. ಕಸದಲ್ಲಿರುವ ತೀರಾ ಕಡಿಮೆ ಪ್ರಮಾಣದ ಚಿನ್ನವನ್ನು ಬೇರ್ಪಡಿಸಲು ಪಾದರಸ ಬಳಸುತ್ತಾರೆ. ಈ ಪ್ರಕ್ರಿಯೆಯಲ್ಲಿ ನೈಟ್ರೋಜನ್ ಆಕ್ಸೈಡ್, ಸಲ್ಫರ್ ಆಕ್ಸೈಡ್ ಮತ್ತಿತರ ವಿಷಾನಿಲಗಳು ಹೊರಬಂದು ವಾತಾವರಣಕ್ಕೆ ಸೇರುತ್ತಿವೆ. ಇವು ಬೆರೆತ ಗಾಳಿ ಸೇವನೆ ಮನುಷ್ಯರಲ್ಲಿ ಉಸಿರಾಟದ ಸಮಸ್ಯೆಗಳನ್ನು ಉಂಟು ಮಾಡುತ್ತದೆ. ಇನ್ನು ಸಂಸ್ಕರಣಾ ಘಟಕಗಳಲ್ಲಿ ಕೆಲಸ ಮಾಡುವವರ ಮೇಲೆ ಎಂತಹ ಪರಿಣಾಮ ಆಗಬಹುದು?

ರಾಜ್ಯ ಸರ್ಕಾರ ಪರಿಸರ ರಕ್ಷಣೆ ಕುರಿತಂತೆ ಜನ ಜಾಗೃತಿ ಮೂಡಿಸಲು ಪ್ರತಿ ವರ್ಷ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತದೆ. ಪರಿಸರ ಮಾಲಿನ್ಯ ನಿಯಂತ್ರಣಕ್ಕಾಗಿಯೇ ಮಂಡಳಿಯೊಂದನ್ನು ಸ್ಥಾಪಿಸಿದೆ. ರಾಜ್ಯದಲ್ಲಿ ಅನೇಕ ಪರಿಸರ ಸಂಘಟನೆಗಳು, ವ್ಯಕ್ತಿಗಳು ಕೆಲಸ ಮಾಡುತ್ತಿದ್ದಾರೆ. ಪರಿಸರ ಸಂರಕ್ಷಣೆಯ ಮಾತುಗಳಿಗೆ ಬರವಿಲ್ಲ. ದುರದೃಷ್ಟಕರ ವಿಚಾರವೆಂದರೆ ಇ-ಕಸದ ಅವೈಜ್ಞಾನಿಕ ಸಂಸ್ಕರಣೆಯಿಂದ ಪರಿಸರ ಹಾಗೂ ಜನರ ಆರೋಗ್ಯಕ್ಕೆ ಆಗುತ್ತಿರುವ ಹಾನಿ ಕುರಿತು ಜನ ಸಾಮಾನ್ಯರಿಗೆ ಸರಿಯಾದ ಮಾಹಿತಿ ಸಿಗುತ್ತಿಲ್ಲ. ನಿತ್ಯ ಪರಿಸರ ಸಂರಕ್ಷಣೆಯ ಜಾಗಟೆ ಬಾರಿಸುವ ಸರ್ಕಾರವೂ ಈ ವಿಷಯದಲ್ಲಿ ಕತ್ತಲಲ್ಲಿದೆ. ಸರ್ಕಾರ ಮೊದಲು ತನ್ನ ಕಚೇರಿಗಳ ಇ-ಕಸ ಅನಧಿಕೃತ ಸಂಸ್ಕರಣಾ ಘಟಕ ಸೇರುವುದನ್ನು ತಡೆಯಬೇಕು. ಅವೈಜ್ಞಾನಿಕವಾಗಿ ಇ-ಕಸ ಸಂಸ್ಕರಿಸುವ ಘಟಕಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇ-ಕಸವನ್ನು ಸರ್ಕಾರವೇ ಸಂಸ್ಕರಿಸಬೇಕು ಎಂದಲ್ಲ. ಖಾಸಗಿಯವರಿಗೂ ಅವಕಾಶ ಕೊಡಬೇಕು. ಆದರೆ ಸಂಸ್ಕರಣಾ ಘಟಕಗಳಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಉತ್ತೇಜನ ನೀಡಬೇಕು.

■ ಪಿ.ಕೆ. ಹರಿಯಬ್ಬೆ

ರಾಜ್ಯ ಸರ್ಕಾರ ಪರಿಸರ ರಕ್ಷಣೆ ಕುರಿತಂತೆ ಜನ ಜಾಗೃತಿ ಮೂಡಿಸಲು ಪ್ರತಿ ವರ್ಷ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತದೆ. ಪರಿಸರ ಮಾಲಿನ್ಯ ನಿಯಂತ್ರಣಕ್ಕಾಗಿಯೇ ಮಂಡಳಿಯೊಂದನ್ನು ಸ್ಥಾಪಿಸಿದೆ. ರಾಜ್ಯದಲ್ಲಿ ಅನೇಕ ಪರಿಸರ ಸಂಘಟನೆಗಳು, ವ್ಯಕ್ತಿಗಳು ಕೆಲಸ ಮಾಡುತ್ತಿದ್ದಾರೆ. ಪರಿಸರ ಸಂರಕ್ಷಣೆಯ ಮಾತುಗಳಿಗೆ ಬರವಿಲ್ಲ. ದುರದೃಷ್ಟಕರ ವಿಚಾರವೆಂದರೆ ಇ-ಕಸದ ಅವೈಜ್ಞಾನಿಕ ಸಂಸ್ಕರಣೆಯಿಂದ ಪರಿಸರ ಹಾಗೂ ಜನರ ಆರೋಗ್ಯಕ್ಕೆ ಆಗುತ್ತಿರುವ ಹಾನಿ ಕುರಿತು ಜನ ಸಾಮಾನ್ಯರಿಗೆ ಸರಿಯಾದ ಮಾಹಿತಿ ಸಿಗುತ್ತಿಲ್ಲ. ನಿತ್ಯ ಪರಿಸರ ಸಂರಕ್ಷಣೆಯ ಜಾಗಟೆ ಬಾರಿಸುವ ಸರ್ಕಾರವೂ ಈ ವಿಷಯದಲ್ಲಿ ಕತ್ತಲಲ್ಲಿದೆ.



ಶಿಲ್ಪಾ